ದಿನಾಂಕಃ **17.12.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ವಾದಿ ಪರ ಶ್ರೀ ಕೆ.ಎಸ್.ಎನ್.ವಕೀಲರಿಂದ :**

ನಾನು ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನನ್ನ ತಾತ ಡಿ.ಬೋರಯ್ಯರವರು ದಿನಾಂಕಃ 29.06.2021 ರಂದು ಮರಣ ಹೊಂದಿರುತ್ತಾರೆ. ಆಗ ಅವರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ಅವರು ಬದುಕಿದ್ದಾಗ ಮನೆಯ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು. ಅವರು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರು ಎಂದು ಗೊತ್ತಿಲ್ಲ. ಅವರ ಮೂಲತಃ ವೃತ್ತಿ ವ್ಯವಸಾಯವಾಗಿತ್ತು. ಅವರಿಗೆ ಪಾಲಹಳ್ಳಿ ಗ್ರಾಮದಲ್ಲಿ ಪಿತ್ರಾರ್ಜಿತವಾಗಿ ಬಂದ 7 ½ ಎಕರೆ ನೀರಾವರಿ ಜಮೀನಿತ್ತು ಎಂದರೆ ಸುಳ್ಳು. ಸರ್ವೆ ನಂಬರ್ 101, 102, 103, 104 ಆಸ್ತಿಗಳು ನಿಮ್ಮ ಕುಟುಂಬಕ್ಕೆ ಹೇಗೆ ಬಂತು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿಯು ಸರ್ವೆ ನಂಬರ್ 101 ಮಾತ್ರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಉಳಿದ ಆಸ್ತಿಗಳು ನನ್ನ ತಾತನ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದು ಹೇಳುತ್ತಾರೆ. ಕೆಂಪಾಲಿಂಗಾಪುರ ಗ್ರಾಮದ ಸರ್ವೆ ನಂಬರ್ 126 ಮತ್ತು 48 ರ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಆದರೆ ಯಾರಿಂದ ಖರೀದಿ ಮಾಡಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳೆಂದು ನಾನು ದಾಖಲೆ ನೋಡಿಲ್ಲ.

**2.** ವಾದಿಯು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಹಾಜರುಪಡಿಸಿರುವ ದಾಖಲೆಗಳನ್ನು ನಾನು ನೋಡಿಲ್ಲ. ಕೆಂಪಾಲಿಂಗಾಪುರ ಗ್ರಾಮದ ಆಸ್ತಿಗಳಲ್ಲಿ ಫಲ ಬಿಡುವ ಸುಮಾರು 70 ತೆಂಗಿನ ಮರಗಳಿವೆ ಎಂದರೆ ಸರಿ. ನನಗೆ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತ ಆಸ್ತಿಗಳಿಗೆ ಇರುವ ವ್ಯತ್ಯಾಸ ಗೊತ್ತಿದೆ. ಮೇಲೆ ಹೇಳಿದ ಸರ್ವೆ ನಂಬರ್ ಆಸ್ತಿಗಳು ಯಾರಿಂದ, ಹೇಗೆ ಬಂದವು ಎಂದು ನನಗೆ ಗೊತ್ತಿಲ್ಲ.

ಬೋರಯ್ಯರವರಿಗೆ ಪಾಲಹಳ್ಳಿಯಲ್ಲಿ 7 ½ ಎಕರೆ ನೀರಾವರಿ ಜಮೀನು ಹಾಗೂ 2 ½ ಎಕರೆ ಭಾಗಾಯ್ತು ಜಮೀನು ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸುಳ್ಳು. ಸ್ವಯಾರ್ಜಿತ ಎಂದರೆ ಕ್ರಯ ಅಥವಾ ದಾನದ ಮೂಲಕ ಬಂದರೆ ಆ ಆಸ್ತಿ ಮಾತ್ರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಬೋರಯ್ಯರವರಿಗೆ ಆದಾಯ ವ್ಯವಸಾಯದಿಂದ ಮಾತ್ರ ಬರುತ್ತಿತ್ತು ಎಂದರೆ ಸಾಕ್ಷಿಯು ಕಾಯಿ ವ್ಯಾಪಾರ ಮತ್ತು ಬೆಲ್ಲದ ವ್ಯಾಪಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

**3.** ತಕರಾರನ್ನು ನಾನೇ ಹೇಳಿ, ಬರೆಯಿಸಿ ಹಾಕಿಸಿರುತ್ತೇನೆ. ನಾನು ನನ್ನ ತಕರಾರಿನಲ್ಲಾಗಲೀ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ, ನನ್ನ ತಾತ ಡಿ.ಬೋರಯ್ಯರವರು ಕಾಯಿ ವ್ಯಾಪಾರ ಮತ್ತು ಬೆಲ್ಲದ ವ್ಯಾಪಾರ ಮಾಡುತ್ತಿದ್ದರು ಎಂದು ಹೇಳಿ ಬರೆಯಿಸಿರುವುದಿಲ್ಲ. ನನ್ನ ತಾತ ಬದುಕಿದ್ದಾಗ ಅವರ ಕುಟುಂಬಕ್ಕೆ ಬಂದ ಆದಾಯ ಹಾಗೂ ಖರ್ಚಿನ ಬಗ್ಗೆ ದಾಖಲೆಗಳನ್ನು ಇಟ್ಟಿರುವುದಿಲ್ಲ. ನನ್ನ ತಾತ ಬದುಕಿದ್ದಾಗ ಕುಟುಂಬಕ್ಕೆ ಎಷ್ಟು ಆದಾಯ ಇತ್ತು, ಎಷ್ಟು ಖರ್ಚು ಇತ್ತು ಎನ್ನುವ ಬಗ್ಗೆ ನಿಖರವಾದ ಮಾಹಿತಿ ನನಗೆ ಇರುವುದಿಲ್ಲ.

**4.** ನನ್ನ ತಾತ ಬೋರಯ್ಯರಿಗೆ 6 ಜನ ಮಕ್ಕಳು. 1. ನನ್ನ ತಾಯಿ ಬಿ.ಎನ್.ರತ್ನಮ್ಮ, 2. ಮಂಜುನಾಥ್, 3. ಮೈನಾವತಿ, 4. ಶಿವಕುಮಾರ್, 5. ಹೇಮಲತಾ ಹಾಗೂ 6. ರಮೇಶ್ ಎಂದು ಇರುತ್ತಾರೆ. ಅದರಲ್ಲಿ ನನ್ನ ತಾಯಿ 1996 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿಯನ್ನು ಬಿಡದಿಯ ಹತ್ತಿರ ಇಟ್ಟಮಡು ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದರು, ಅವರ ಮದುವೆ ಯಾವ ವರ್ಷ ಆಯಿತು ಎಂದು ನೆನಪಿಲ್ಲ. ನಾನು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದ್ದು ತಂದೆ-ತಾಯಿಯ ನಿರ್ವಹಣೆಯಲ್ಲಿದ್ದೆ. ನಾನು ಇಟ್ಟಮಡು ಗ್ರಾಮದಲ್ಲಿ ವ್ಯವಸಾಯ ಮಾಡಿಕೊಂಡಿರುತ್ತೇನೆ. ನನಗೆ 8 ಎಕರೆ ಜಮೀನು ಇದೆ. ಆ ಜಮೀನು ನೀರಾವರಿ ಮತ್ತು ಖುಷ್ಕಿ ಎರಡರಿಂದಲೂ ಕೂಡಿದೆ. ನನ್ನ ತಾತನ ಕೊನೆಯ ಮಗ ರಮೇಶ್ 2008 ರಲ್ಲಿ ಮರಣ ಹೊಂದಿರುತ್ತಾರೆ. ಶಿವಕುಮಾರ್ ರವರು 2019 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾತ ಬದುಕಿದ್ದಾಗ ಆಗಲೀ, ನಂತರವಾಗಲೀ ನೋಂದಾಯಿತ ವಿಭಾಗ ಪತ್ರ ಆಗಿರುವುದಿಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಾಕಾಶ ಕೋರಿದ್ದು, ಸಮಯಾವಾಕಾಶ ನೀಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**